# ಉಸಿರು ತೊರೆದ ಬೆಟ್ಟದ ಜೀವ



■ ವಿಕ ಸುದ್ದಿಲೋಕ ಉಡುಪಿ

ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಚೇರ್ಕಾಡಿ ರಾಮಚಂದ್ರ ರಾವ್(91)ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ರಾತ್ರಿ 9.15 ಕ್ಕೆ ಚೇರ್ಕಾಡಿಯ ಸ್ವಗೃಹದಲ್ಲಿ ನಿಧನರಾದರು. ಮೃತರಿಗೆ ಪುತ್ರರಾದ ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಪ್ರಬಂಧಕ ಆರೂರು ಮಂಜುನಾಥ ರಾವ್, ಆನಂದ ರಾವ್ ಹಾಗೂ ಪುತ್ರಿ ಸುಮತಿ, ಆರು ಮೊಮ್ಮಕ್ಕಳು, ಏಳು ಮರಿಮಕ್ಕಳಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಅವರ ಸ್ವಂತ ಜಮೀನಿನಲ್ಲಿ ನಡೆಯಲಿದೆ.

## ಚೇರ್ಕಾಡಿ ರಾಮಚಂದ್ರರಾವ್ ಇನ್ನು ಬರೀ ನೆನಪು

■ ಎಸ್. ಜಿ. ಕುರ್ಯ ಉಡುಪಿ

ಕಲಿತದ್ದು ಮೂರನೇ ತರಗತಿ. ಆದರೆ, ಅನ್ನ-ವಸ್ತ್ರದ ಸ್ವಾವಲಂಬನೆಗೆ ಗಾಂಧೀಜಿ ಕೊಟ್ಟ ಕರೆಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡದ್ದು ಮಾತ್ರವಲ್ಲ, ಚೇರ್ಕಾಡಿ(ಸರ್ವೋದಯ) ಕೃಷಿ ಪದ್ಧತಿ ಮತ್ತು ಸರ್ವೋದಯ ರಾಟೆಯನ್ನು ಶೋಧಿಸಿದವರು ನಮ್ಮ ಚೇರ್ಕಾಡಿ ರಾಮಚಂದ್ರ ರಾವ್.

ಭಾರತದ ಫುಕುವೋಕಾ ಎಂದೇ ಖ್ಯಾತಿ ಪಡೆದಿದ್ದ ಇವರ ಆದರ್ಶ ಬದುಕು ಇಂದಿನ ರೈತರಿಗೆ ಮಾದರಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಮಡಿಕೇರಿಯಲ್ಲಿ 1919 ರಲ್ಲಿ ನಾರಾಯಣ ರಾವ್-ಜಲಜಾ ದಂಪತಿಯ ಪುತ್ರನಾಗಿ ಜನಿಸಿದ ಚೇರ್ಕಾಡಿ, ಎರಡೂವರೆ ವರ್ಷಕ್ಕೆ ತಂದೆ-ತಾಯಿಯನ್ನು ಕಳೆದುಕೊಂಡರು.

ಅಕ್ಕನೊಂದಿಗೆ ಧರ್ಮಸ್ಥಳಕ್ಕೆ ತೆರಳಿ, ಅಲ್ಲಿಂದ ಮತ್ತೊಬ್ಬ ಸಹೋದರಿ ಜತೆಗೆ ಚೇರ್ಕಾಡಿಗೆ ಬಂದರು. ಭಾವನ ಜತೆ ಕೃಷಿ ಕೆಲಸದಲ್ಲಿ ತೊಡಗಿದರು. ಗಾಂಧೀಜಿ ಪ್ರಭಾವದಿಂದ ಕೈಮಗ್ಗ ಕಲಿತರು.

ಬ್ರಹ್ಮಾವರ ಮತ್ತು ಮೂಡಬಿದಿರೆಯಲ್ಲಿ ಖಾದಿ ನೇಯ್ಗೆಯಲ್ಲಿ ತೊಡಗಿದರು. 1944 ರಲ್ಲಿ ಮಂಗಳೂರಿನ ಲಕ್ಷ್ಮೀ ಎಂಬುವರನ್ನು ವಿವಾಹವಾದರು. ಎರಡನೇ ಮಹಾಯುದ್ಧದ ಸಂದರ್ಭ ದೇಶದಲ್ಲಿ ಅಕ್ಕಿಯ ಅಭಾವ ತಲೆದೋರಿತು. ಗಾಂಧೀಜಿ ನಮಗೆ ಬೇಕಾದ ಅನ್ನ-ವಸ್ತ್ರವನ್ನು ನಾವೇ ಉತ್ಪಾದಿಸಲು ಕರೆ ಕೊಟ್ಟರು. ಸ್ವಾವಲಂಬನೆಯ ಮಂತ್ರ ಚೇರ್ಕಾಡಿಯವರ ಬದುಕಿನ ಜ್ಯೋತಿಯಾಯಿತು. ಭಾವನಿಂದ ಪಡೆದ ಎರಡು ಎಕರೆ ಗುಡ್ಡ ಅವರ ಕರ್ಮಭೂಮಿ ಯಾಯಿತು. ಕಾಳುಮೆಣಸು, ಹಲಸು, ಅನಾನಸು ಸಹಿತ ಮಿಶ್ರ ಬೆಳೆಗಳನ್ನು ಬೆಳದರು. ನಾನಾ ಪ್ರಯೋಗಗಳನ್ನೂ ಮಾಡಿದರು.

1962ರಲ್ಲಿ ಯಶಸ್ವಿ ಕೃಷಿಕ ಎನಿಸಿಕೊಂಡರು. ಹಸಿರು ಕ್ರಾಂತಿಯ ಸಂದರ್ಭದಲ್ಲಿ ಇವರು ರೂಪಿಸಿದ ಚೇರ್ಕಾಡಿ-ಸರ್ವೋದಯ ಕೃಷಿ ಪದ್ಧತಿ ಹೆಚ್ಚು ಪ್ರಖ್ಯಾತವಾಯಿತು. ಭಾರತೀಯ ಫುಕುವೋಕಾ ಎನ್ನುವ ಖ್ಯಾತಿಗೂ ಪಾತ್ರರಾದರು. ರಾಜ್ಯ ಸರಕಾರದಿಂದ ಕೃಷಿ ಪಂಡಿತ ಪ್ರಶಸ್ತಿ ಪಡೆದರು.

ಇವರ ಕೃಷಿ ಕ್ಷೇತ್ರಕ್ಕೆ ರಾಜ್ಯ, ಹೊರರಾಜ್ಯಗಳಿಂದ ಕೃಷಿಕರು, ವಿಜ್ಞಾನಿಗಳು ಭೇಟಿ ನೀಡಿ ಅಧ್ಯಯನ ನಡೆಸಿದ್ದಾರೆ. ವಿನೋಬಾ ಕೂಡಾ ಇವರ ಮೇಲೆ ಪ್ರಭಾವ ಬೀರಿದ್ದಾರೆ. ಇವರ ಜಮೀನಿಗೆ ಭೇಟಿ ನೀಡಿದ್ದ ಅಂದಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ, ಖಾಲಿ ಜಾಗ ಕೊಡುವೆ, ಕೃಷಿ ಮಾಡಿ ಎಂದಿದ್ದರು.

ಆದರೆ, ಚೇರ್ಕಾಡಿ ಬಡವರಿಗೆ ಕೊಡಿ ಎಂದಿದ್ದರು. ಬಡ ರೈತರಿಗೆ ತಲಾ ಎರಡು ಎಕರೆ ಕೃಷಿ ಭೂಮಿಯನ್ನು ಸರಕಾರ ಕೊಡಬೇಕು. ಆದರೆ, ಸಾಲ ಕೊಡಬಾರದು. ಸಾಲದಿಂದ ಶೂಲ ಎಂದಿದ್ದ ಚೇರ್ಕಾಡಿ, ತಮ್ಮ ಶಕ್ತಿ ಕುಂದುವ ತನಕವೂ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಿಲ್ಲ. ರಾಟೆಯಿಂದ ನೀರೆಳೆಯುತ್ತಿದ್ದರು. ಚಿಮಣಿ ದೀಪದಿಂದ ಬೆಳಕು ಕಾಣುತ್ತಿದ್ದರು.

ಕೃಷಿಯ ಒಳಹೊರಗನ್ನು ಬಲ್ಲ, ಮಾದರಿ ತಂತ್ರಗಳನ್ನು ಅರೆದು ಕುಡಿದಿದ್ದ ಚೇರ್ಕಾಡಿ ಮಾತು ಪಕ್ಕಾ. ಸರಕಾರದ ಕೃಷಿ ನೀತಿಯೇ ರೈತರಿಗೆ ಮಾರಕ. ರೈತರು ಸೋಮಾರಿಗಳಾಗುತ್ತಿದ್ದಾರೆ. ಸಾಲ-ಸಬ್ಸಿಡಿ, ರಸಗೊಬ್ಬರ ಸಹಿತ ವಿಷವನ್ನೇ ನೆಚ್ಚಿಕೊಳ್ಳುತ್ತಿರುವ ಪರಿಣಾಮ, ಭೂಮಿ- ಆಹಾರ ವೆಲ್ಲವೂ ವಿಷಮಯವಾಗುತ್ತಿದೆ. ಆತ್ಮಹತ್ಯೆಗೆ ಎಡೆಮಾಡಿಕೊಡುತ್ತಿದೆ ಎನ್ನುತ್ತಿದ್ದರು.



### ಹೆಜ್ಜೆ ಗುರುತು

**ಜನ್ಮಸ್ಥಳ ಮಡಿಕೇರಿ(1919)**

**ತಂದೆ-ತಾಯಿ: ನಾರಾಯಣ ರಾವ್-ಜಲಜಾ**

**ಪತ್ನಿ: ಲಕ್ಷ್ಮೀ (1944 ರಲ್ಲಿ ವಿವಾಹ)**

**ಸ್ಫೂರ್ತಿ:ಮಹಾತ್ಮ ಗಾಂಧಿ,ವಿನೋಬಾ ಬಾವೆ**

**ಕರ್ಮಭೂಮಿ: ಚೇರ್ಕಾಡಿ**

**ಸಂಶೋಧನೆ:ಚೇರ್ಕಾಡಿ- ಸರ್ವೋದಯ ಕೃಷಿ ಪದ್ಧತಿ,ಸರ್ವೋದಯ ರಾಟೆ.**

**ಕೃಷಿ ಪಂಡಿತ ಪ್ರಶಸ್ತಿ 2002-03**